ಶ್ರೀ ಸಂಗಣ್ಣ ಕರಡಿ : ನನ್ನ ಎರಡನೆಯ ಪ್ರಶ್ನೆಗೆ ತಾಲ್ಲೂಕಿನ ಉಪ ಮಾರುಕಟ್ಟೆಗಳು ಪ್ರಾಂಗಣಗಳಲ್ಲಿ ಅಗತ್ಯಕ್ಕೆ ಅನುಗುಣವಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೆಂಬ ಕೇಳಬಯಸುತ್ತೇನೆ. ಸರ್ಕಾರದವರು ಆ ಮಾರುಕಟ್ಟೆಯಲ್ಲಿ ದಳ್ಳಾಳಿಗಳು ಮತ್ತು ಮಾಲೀಕರಿಂದ ತೆರಿಗೆಯನ್ನು ಕಳೆದ ಅನೇಕವರ್ಷಗಳಿಂದ ವಸೂಲು ಮಾಡುತ್ತಿದ್ದರೂ ಕೂಡ ಅಲ್ಲಿ ಕುಡಿಯುವ ನೀರು ಮತ್ತು ನೆರಳಿನ ವ್ಯವಸ್ಥೆಯನ್ನು ಮಾಡಿಲ್ಲ. ಈ ಕೆಲಸವನ್ನು ಅತ್ಯಂತ ತೀವ್ರಗತಿಯಿಂದ ಮಾಡಬೇಕು. ಈ ಕೆಲಸವನ್ನು ಯಾವಾಗಿನಿಂದ ಕೈಗೊಳ್ಳುತ್ತೇರೆಂಬುದನ್ನು ಕೇಳಬಯಸುತ್ತೇನೆ.

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೆ, ಕೊಪ್ಪಳ ಮಾರುಕಟ್ಟೆಯಲ್ಲಿ 3 ಉಪಮಾರುಕಟ್ಟೆಗಳು ಬರುತ್ತವೆ. ಈ ಮೂರಕ್ಕೂ ಬೇಕಾದ ಜಾಗವನ್ನು ಸ್ವಾಧೀನಪಡಿಸಿಕೊಂಡಿದ್ದೇವೆ. ಈ ವರ್ಷ ಎಲ್ಲಾ ಕೆಲಸಗಳನ್ನು ತೆಗೆದು ಕೊಳ್ಳುತ್ತೇವೆಂದು ತಿಳಿಸಬಯಸುತ್ತೇನೆ.

ಬಿನ್ನಿಮಿಲ್ ನೌಕರರಿಗೆ ವಸತಿ ಗೃಹಗಳ ನಿರ್ಮಾಣ

324 - ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರಿನ ಬಿನ್ನಿಮಿಲ್‌ನಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ ಎಷ್ಟು?*

ಆ) *ಈ ಮಿಲ್‌ಗೆ ಸೇರಿದ ಜಾಗದಲ್ಲಿ ಎಷ್ಟು ವಸತಿ ಗೃಹಗಳನ್ನು ನೌಕರರುಗಳಿಗೆ ನಿರ್ಮಿಸಿಕೊಡಲಾಗಿದೆ?*

ಇ) *ಈ ವಸತಿ ಗೃಹಗಳಿಗಾಗಿ ಕಾರ್ಖಾನೆಯವರು ಕಾದಿರಿಸಿದ ಜಾಗವೆಷ್ಟು?*

ಈ) *ವಸತಿ ಗೃಹಗಳಿಗಾಗಿ ಕಾದಿರಿಸಿದ ಜಾಗವನ್ನು ಕಾರ್ಖಾನೆಯವರು ಖಾಸಗೀ ಬಿಲ್ಡರ್ಸ್‌ಗಳಿಗೆ ಮಾರಲು ಉದ್ದೇಶಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಉ) *ಹಾಗಿದಲ್ಲಿ, ನೌಕರರುಗಳಿಗೆ ಇದರಿಂದ ತೊಂದರೆಯಾಗುವುದಿಲ್ಲವೆ?*

ಊ) *ಈ ಜಾಗವನ್ನು ನೌಕರರುಗಳ ವಸತಿ ಗೃಹಗಳಿಗೆ ಮಾತ್ರ ಉಪಯೋಗಿಸಲು ಸರ್ಕಾರ ಆದೇಶ ನೀಡುವುದೆ?*

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) 1335.

ಆ) 907.

ಇ) ಸುಮಾರು 44 ಎಕರೆ.

ಈ) ಇಲ್ಲ.

ಊ) ಉದ್ಭವಿಸುವುದಿಲ್ಲ.

ಋ) ಉದ್ಭವಿಸುವುದಿಲ್ಲ.

ಶ್ರೀ ವಿ. ಸೋಮಣ್ಣ : ಬೆಂಗಳೂರು ನಗರದ ನನ್ನ ಕ್ಷೇತ್ರದಲ್ಲಿರುವ ಬಿನ್ನಿ ಮಿಲ್‌ನಲ್ಲಿ ಕೆಲಸಮಾಡುತ್ತಿರುವ ಕೆಲಸಗಾರರ ಸಂಖ್ಯೆ : 1335 ಎಂದು ಹೇಳಿದ್ದಾರೆ. ಈ ಮಿಲಗೆ ಸೇರಿದ ಜಾಗದಲ್ಲಿ ಎಷ್ಟು ವಸತಿ ಗೃಹಗಳನ್ನು ನಿರ್ಮಿಸಿಕೊಡಲಾಗಿದೆ ಎಂಬುದಕ್ಕೆ 907 ಎಂದು ಹೇಳಿದ್ದಾರೆ. ಈ 907 ಮನೆಗಳ ಪೈಕಿ ಈಗಾಗಲೇ 200 ಮನೆಗಳನ್ನು ಒಡೆದುಹಾಕಿ ಅವರನ್ನು ಅಲ್ಲಿಂದ ಒಕ್ಕಲು ಎಬ್ಬಿಸಿದ್ದಾರೆ. ಅದು ಎಷ್ಟು ಎಕರೆ ಪ್ರದೇಶ ಇದೆಯೆಂದು ಕೇಳಿರುವುದಕ್ಕೆ 44 ಎಕರೆ ಎಂದು ಹೇಳಿದ್ದಾರೆ. ನನಗೆ ತಿಳಿದಂತೆ ಆ ಪ್ರದೇಶ 125 ಎಕರೆ ಇದೆ; ಮತ್ತು ವಸತಿ ಗೃಹಗಳಿಗಾಗಿ ಕಾದಿರಿಸಿದ ಜಾಗವನ್ನು ಕಾರ್ಖಾನೆಯವರು ಖಾಸಗೀ ಬಿಲ್ಡರ್ಸಗೆ ಮಾರಲು ಉದ್ದೇಶಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದರೆ 'ಇಲ್ಲ' ಎಂದು ಹೇಳಿದ್ದಾರೆ. ಈಗಾಗಲೇ ಅಲ್ಲಿ ಖಾಸಗಿಯವರಿಗೆ 20 ಏಕರೆಯನ್ನು ಕೊಟ್ಟು ಅಲ್ಲಿ ಅಪಾರ್ಟಮೆಂಟ್ ನಿರ್ಮಾಣವಾಗುತ್ತಿದೆ. ಇನ್ನೊಂದು ಕಡೆ $6^1/_2$ ಎಕರೆಯನ್ನು ಕೊಟ್ಟು ಬೇರೆಯವರಿಂದ ಲೇಔಟ್ ಮಾಡಿಸಿ ಮನೆಗಳನ್ನು ಕಟ್ಟಿಸಿದ್ದಾರೆ. ಮತ್ತೊಂದು ಕಡೆ 10 ಗುಂಟೆ ಜಾಗವನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರೆ. ಅಲ್ಲಿರತಕ್ಕ 907 ಮನೆಗಳಲ್ಲಿ 200 ಮನೆಗಳನ್ನು ಒಡೆದುಹಾಕಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ? ಇರತಕ್ಕ 125 ಏಕರೆ ಜಮೀನಿನಲ್ಲಿ 20 ಎಕರೆಗೂ ಹೆಚ್ಚು ಜಾಗವನ್ನು ಖಾಸಗಿ ಬಿಲ್ಡರ್ಸಗೆ ಕೊಟ್ಟು ಅಲ್ಲಿ ಕಟ್ಟಡಗಳು ನಿರ್ಮಾಣವಾಗುತ್ತಿರುವುದು ನಿಜವೇ? 10 ಗುಂಟೆ ಜಾಗವನ್ನು ಖಾಸಗೀ ವ್ಯಕ್ತಿಗೆ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟರೆ ಅನಂತರ ಮುಂದಿನ ಪ್ರಶ್ನೆಗಳನ್ನು ಕೇಳುವುದಕ್ಕೆ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಸಿ. ಗುರುನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕ್ ಪ್ರಶ್ನೆ ಎಂದರೆ ಆ ಬಿನ್ನಿಮಿಲ್ ಕಾರ್ಖಾನೆ ಆಸ್ತಿಗೆ ಸಂಬಂಧಪಟ್ಟಂತೆ ಕೇಳಿರುತ್ತಾರೆ. ಅಲ್ಲಿ ಕೆಲವರು ಅನಧಿಕೃತವಾಗಿ ವಾಸಮಾಡುತ್ತಿದ್ದಾರೆಂಬುದನ್ನು ಹೇಳಬಯಸುತ್ತೇನೆ. ಅವರು ಯಾರೂ ಕೂಡ ಕೆಲಸದಲ್ಲಿಲ್ಲ. ಬಿ.ಎಫ್.ಆರ್.ನವರ ಶಿಫಾರಸಿನ ಮೇರೆಗೆ ಅಲ್ಲಿ ಕೆಲವು ಕೆಲಸ ನಡೆಯುತ್ತಿದೆ, ಅಲ್ಲಿ ಯಾರಾದರೂ ಕಾರ್ಮಿಕರಿಗೆ ಏನಾದರೂ ತೊಂದರೆ ಆದರೆ ಅದರ ಬಗ್ಗೆ ಮಾನ್ಯ ಶಾಸಕರನ್ನು ಮತ್ತು ಕಾರ್ಮಿಕ ಇಲಾಖೆಯ ಅಧಿಕಾರಿಗಳನ್ನು ಬರಮಾಡಿಕೊಂಡು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನಸುತ್ತೇನೆ.

ಶ್ರೀ ವಿ. ಸೋಮಣ್ಣ : ಅಲ್ಲಿ ಈಗಿರತಕ್ಕ 600 ಮನೆಗಳು ಏನಿವೆ ಅಲ್ಲಿ ಕೆಟ್ಟು ಹೋಗಿರತಕ್ಕ ಕುಡಿಯುವ ನೀರಿನ ಲೈನನ್ನು ರಿಪೇರಿ ಮಾಡಲು ಬಿಡುತ್ತಿಲ್ಲ, ವಿದ್ಯುಚ್ಛಕ್ತಿ ಲೈನ್ ಕೆಟ್ಟು ಹೋಗಿರುವುದನ್ನು ರಿಪೇರಿ ಮಾಡಲು ಬಿಡುತ್ತಿಲ್ಲ, ಸುಮಾರು 40-50 ವರ್ಷಗಳ ಹಿಂದೆ ಹಾಕಿರತಕ್ಕ ಸ್ಯಾನಿಟೇಷನ್ ತೊಂದರೆ ಆದರೆ ಅದನ್ನು ಕ್ಲೀನ್ ಮಾಡುವುದಕ್ಕೆ ಬಿಡುತ್ತಿಲ್ಲ. ಈ ಕಾರ್ಖಾನೆಯ ಮಾಲೀಕರು ಅಲ್ಲಿ ದಬ್ಬಾಳಿಕೆ ಮಾಡುತ್ತಿದ್ದಾರೆ. ಆದ್ದರಿಂದ ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಈಗ ಅವರು ಸರ್ಕಾರಕ್ಕೆ ಏನು ಮಾಹಿತಿ ಕೊಟ್ಟಿದ್ದಾರೆ ಇದು ಸತ್ಯಕೆ ದೂರವಾದುದು. ಆದ್ದರಿಂದ ಈಗ ತಾವು

ಕೂಡಲೇ ಅವರನ್ನು ಕರೆಯಿಸಿಕೊಂಡು ಅಲ್ಲಿ ಅಪಾರ್ಟ್‌ಮೆಂಟ್ ಏನು ಕಟ್ಟುತ್ತಿದ್ದಾರೆ ಅದನ್ನು ನಿಲ್ಲಸಬೇಕು. ಈ ಜಾಗವನ್ನು ಯಾರಿಗಾಗಿ ಮೀಸಲಿಟ್ಟಿದ್ದರೋ ಅಲ್ಲಿ ಒಂದೆರಡು ತಲೆಮಾರಿನಿಂದ ಯಾರ್ಯಾರಿದ್ದರು ಅವರಿಗೆ 30-40 ಅಡಿ ಜಾಗವನ್ನು ಕೊಡಿ ಎಂದರೂ ಅವರು ಕೊಡುತ್ತಿಲ್ಲ. ಇದನ್ನು ಅರಿತುಕೊಂಡು ಅಲ್ಲಿ ಈಗ ಕಟ್ಟುತ್ತಿರುವ ಕಟ್ಟಡದ ಕೆಲಸವನ್ನು ಕೂಡಲೇ ಮಾನ್ಯ ಕಾರ್ಮಿಕ ಮಂತ್ರಿಗಳು ನಿಲ್ಲಿಸಬೇಕು. ಅಲ್ಲಿರತಕ್ಕ ಜನರಿಗೆ ಮೂಲಭೂತ ಸೌಲಭ್ಯಗಳನ್ನೊದಗಿಸಲು ಕೂಡಲೇ ವ್ಯವಸ್ಥೆ ಮಾಡುವಂತೆ ಆ ಕಾರ್ಖಾನೆಯ ಮಾಲೀಕರಿಗೆ ಸೂಚನೆ ನೀಡಬೇಕೆಂದು ಒತ್ತಾಯಮಾಡುತ್ತೇನೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಸಮಂಜಸ ಉತ್ತರ ನೀಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಗುರುನಾಥ್ : ಮಾನ್ಯ ಅಧ್ಯಕ್ಷರೇ, ಕಾನೂನು ಬಹಿರವಾಗಿ ಯಾವುದೇ ಕೆಲಸ ಅಲ್ಲಿ ನಡೆಯುತ್ತಿದ್ದರೆ, ಅದಕ್ಕೆ ನಿರ್ಬಂಧಿಸಿ ಸೋಮಣ್ಣನವರು ಹೇಳಿದ ಹಾಗೆ ಒಂದು ಸಂಧಾನವನ್ನು ನಡೆಸಿ, ತೊಂದರೆಯಲ್ಲಿರತಕ್ಕಂತಹ ಕೆಲಸಗಾರರಿಗೆ ಒಳ್ಳೆಯ ಸವಲತ್ತುಗಳನ್ನು ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

ಹುಬ್ಬಳ್ಳಿ ಭೂ ನ್ಯಾಯ ಮಂಡಳಿ ಕುರಿತು

325 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಭೂ ನ್ಯಾಯ ಮಂಡಳಿಯಲ್ಲಿ ಚಾಲ್ತಿ ಇರುವ ಪ್ರಕರಣಗಳೆಷ್ಟು ಮತ್ತು ಅವುಗಳ ವಿಲೇವಾರಿಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಆ) ಭೂ ನ್ಯಾಯ ಮಂಡಳಿ ಸದಸ್ಯರನ್ನು ಯಾವಾಗ ನೇಮಕ ಮಾಡಲಾಗುವುದು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) 16 ಅರ್ಜಿಗಳು.

ಆ) ಶೀಘ್ರದಲ್ಲೇ ಭೂ ನ್ಯಾಯ ಮಂಡಳಿ ಪುನರ್ ರಚಿಸಲಾಗುವುದು ಮತ್ತು ವಿಲೇವಾರಿಗೆ ಕ್ರಮ ತೆಗೆದುಕೊಳ್ಳಲಾಗುವುದು.

ಉತ್ತರವನ್ನು ಒದಗಿಸಿದ್ದೇನೆ ಮತ್ತು ಅದರ ಜೊತೆಗೆ ಸಂಬಂಧಿಸಿದ್ದಂತೆ ಇನ್ನು ಹೆಚ್ಚುವರಿ ಉತ್ತರವನ್ನು ಕೊಟ್ಟು ಬಿಡುತ್ತೇನೆ. ಒಟ್ಟು 3,084 ಅರ್ಜಿಗಳನ್ನು ಹಾಕಿದ್ದರು. 3,084 ಅರ್ಜಿಗಳನ್ನು ಕೂಡ ಪೂರ್ಣ ಮಾಡಿದ್ದಾರೆ. 108 ಕೇಸಗಳಲ್ಲಿ ಹೈಕೋರ್ಟಗೆ ಹೋಗಿದ್ದಾರೆ. ಅದರಲ್ಲಿ 19 ಕೇಸ್ ರಿಮ್ಯಾಂಡ್ ಆಗಿತ್ತು. ಇದರಲ್ಲಿ 3 ಕೇಸ್ ಡಿಸಪೋಸ್ ಆಯಿತು. ಇನ್ನು ಉಳಿದುಕೊಂಡಿರುವುದು 16 ಕೇಸಗಳು ಮಾತ್ರ ಬಾಕಿ ಇದೆ.

ಶ್ರೀ ಜಗದೀಶ್ ಶೆಟ್ಟರ್ : ಇನ್ನು ಕೇಸಗಳು ಬಾಕಿ ಇರುವುದರಿಂದ, ಶೀಘ್ರದಲ್ಲಿಯೇ ಭೂ ನ್ಯಾಯಮಂಡಳಿಯನ್ನು ಪುನರ್ ರಚಿಸಲಾಗುವುದು ಎಂದು ಹೇಳಿದ್ದಾರೆ, ಈಗಾಗಲೇ ಜನತಾ ಧಳ